Received on 15/9/2021
WOP.

a

# ಕರ್ನಾಟಕ ಸರ್ಕಾರ
## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ನಡವಳಿಗಳು

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಗೂಲಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಿರುವವರಿಗೆ ಅನುದಾನ ಬಿಡುಗಡೆ ಮಾಡುವ ಕುರಿತು

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ:44:ಸೇಸ್ಥಅ:2013 ದಿ:22.02.2014
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/33/ಯುಇಸಿ/2014, ದಿ:14.11.2014
3. ಸರ್ಕಾರದ ಆದೇಶ ಸಂಖ್ಯೆ:ಇಡಿ:65:ಹೆಚ್‌ಪಿಸಿ:2021,ದಿನಾಂಕ:31.08.2021

****

ಪ್ರಸ್ತಾವನೆ:

ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ದಿನಾಂಕ:10.04.2006ರಂದು 10 ವರ್ಷಗಳಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ದಿನಗೂಲಿ ನೌಕರರನ್ನು ಅವರು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೂ ದಿನಗೂಲಿ ಆಧಾರದ ಮೇಲೆ ಮುಂದುವರೆಸಲು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಉಲ್ಲೇಖ(1)ರ ಸರ್ಕಾರದ ಅಧಿಸೂಚನೆಯನ್ವಯ ಈ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಗೂಲಿ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೂ ದಿನಗೂಲಿ ಆಧಾರದ ಮೇಲೆ ಮುಂದುವರೆಸಲು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಉಲ್ಲೇಖ(3)ರ ಸರ್ಕಾರದ ಆದೇಶದಲ್ಲಿ 2021-22ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡಿರುವ ಅನುದಾನದಲ್ಲಿ ಶಿಕ್ಷಣ ಇಲಾಖೆಯ ಉನ್ನತ ಶಿಕ್ಷಣ ವಲಯದಡಿ ಬರುವ ಕಾಲೇಜು ಶಿಕ್ಷಣದ (ರಾಜ್ಯ ವಲಯ ಯೋಜನೆಗಳು) ಸಂಬಂಧಿಸಿದಂತೆ ಆಯವ್ಯಯದಲ್ಲಿನ ಯೋಜನಾ ಕಾರ್ಯಕ್ರಮಗಳಲ್ಲಿ ಮುಂದುವರೆದ ಕಾರ್ಯಕ್ರಮಗಳಿಗೆ ಅನುದಾನವನ್ನು ಬಿಡುಗಡೆ ಮಾಡಲು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಷರತ್ತು ಬದ್ಧವಾಗಿ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ. ಸದರಿ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿಎಸ್/25/ಎಂಟಿಡಿ/2021, ದಿನಾಂಕ:17.04.2021 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/201/ವೆಚ್ಚ-8/2021, ದಿನಾಂಕ:17.04.2021ರಲ್ಲಿ ನೀಡಿದ ಸಹಮತಿಯಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ/1/ಟಿಎಫ್‌ಪಿ/2021, ದಿನಾಂಕ:05.04.2021ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿರುತ್ತದೆ.

ಸದರಿ ಆದೇಶದ 2020-21ನೇ ಸಾಲಿನಲ್ಲಿ ಮುಂದುವರೆಸಲಾಗಿದ್ದ ಹಾಗೂ 2020-21ನೇ ಸಾಲಿನಲ್ಲಿ ಹೊಸದಾಗಿ ಮಂಜೂರು ಮಾಡಲಾಗಿದ್ದ ಕಾರ್ಯಕ್ರಮಗಳನ್ನು ಮಾತ್ರ 2021-22ನೇ ಸಾಲಿನಲ್ಲಿ ಮುಂದುವರೆಸಿ ಅನುಷ್ಠಾನಗೊಳಸಲು ಅನುಮೋದನೆ ನೀಡಲಾಗಿರುತ್ತದೆ. ಹಾಗೂ ಸದರಿ ಕಾರ್ಯಕ್ರಮಗಳಿಗೆ ಮೂರನೇ ತ್ರೈಮಾಸಿಕ ಅನುದಾನವನ್ನು ಬಿಡುಗಡೆ ಮಾಡಲು ಅನುಮೋದನೆ ನೀಡಲಾಗಿರುತ್ತದೆ.

ಪ್ರಸ್ತುತ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ 14 ಸರ್ಕಾರಿ ಪ್ರಥಮ ದರ್ಜೆ ಕಾಲೇಜು/ವಿದ್ಯಾರ್ಥಿ ನಿಲಯಗಳಲ್ಲಿ ಒಟ್ಟು 15 ದಿನಗೂಲಿ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದು, ಇವರಿಗೆ ನಿಯಮಾನುಸಾರ ಕ್ಲೇಮು ಮಾಡಬೇಕಾಗಿರುವ ವೇತನವನ್ನು ಪಾವತಿಸಲು ಅನುದಾನ ಬಿಡುಗಡೆ ಮಾಡಬೇಕಾಗಿರುತ್ತದೆ. 2021-22ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ:2202-03-103-2-01-033ರಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ 15 ದಿನಗೂಲಿ ನೌಕರರ ಜುಲೈ-2021 ಮತ್ತು ಆಗಸ್ಟ್-2021ರ ಹಿಂಬಾಕಿ ಮೊತ್ತ ಮತ್ತು ಸೆಪ್ಟೆಂಬರ್-2021 ರಿಂದ ನವೆಂಬರ್-2021ರ ಮಾಹೆಯವರೆಗೆ ವೇತನ ಪಾವತಿಸಲು ಒಟ್ಟು ರೂ.10,48,248/-ಅನುದಾನವನ್ನು ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರಿಗೆ ಬಿಡುಗಡೆ ಮಾಡಲು ಈ ಆದೇಶ;

## ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ದಿ.ನೌ.ವೇ/11/2021-22, ಬೆಂಗಳೂರು, ದಿನಾಂಕ:15.09.2021

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸೇವೆಯನ್ನು ಅವರುಗಳು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೆ ದಿನಗೂಲಿ ನೌಕರರಾಗಿ ಮುಂದುವರೆಸಿ ಉಲ್ಲೇಖ(1) ಮತ್ತು (2)ರಲ್ಲಿ ಆದೇಶಿಸಿರುವ ಹಿನ್ನಲೆಯಲ್ಲಿ ಈ

--2

ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿನ 14 ಕಾಲೇಜು/ವಿದ್ಯಾರ್ಥಿನಿಲಯದ ಒಟ್ಟು 15 ಸಿಬ್ಬಂದಿಗಳಿಗೆ ಅವರ ಹೆಸರಿನ ಮುಂದೆ ನಮೂದಿಸಿರುವ ಮೊತ್ತ ಪಾವತಿಸಲು ರೂ.10.48.248/-(ಹತ್ತು ಲಕ್ಷದ ನಲವತ್ತೆಂಟು ಸಾವಿರದ ಎರಡು ನೂರ ನಲವತ್ತೆಂಟು ರೂಪಾಯಿಗಳು ಮಾತ್ರ)ನ್ನು ಪಾವತಿಸಲು 2021-22ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ:2202-03-103-2-01-033ರಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರುಗಳಿಗೆ ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ.

(ಮಾನ್ಯ ಆಯುಕ್ತರಿಂದ ಇ-ಆಫೀಸ್‌ನಲ್ಲಿ ಟಿಪ್ಪಣಿ ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ನಿರ್ದೇಶಕರು

<u>ಷರತ್ತುಗಳು :</u>

1. ಬಿಡುಗಡೆಗೊಳಿಸಿರುವ ಅನುದಾನವನ್ನು ನಿಯಮಾನುಸಾರ ಪರಿಶೀಲಿಸಿ ಬಿಡುಗಡೆಗೊಳಿಸಿರುವ ಉದ್ದೇಶಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ನಿಯಮಗಳನ್ನು ಪಾಲಿಸಿ ಅದರನ್ವಯವೇ ಪಾವತಿಸುವುದು.
2. ಸದರಿ ಅನುದಾನವನ್ನು ಕೆ-2 ತಂತ್ರಾಂಶದಲ್ಲಿ ಕ್ಲೇಮ್ ಮಾಡತಕ್ಕದ್ದು.
3. ಅನುದಾನ ಬಳಕೆಯಾದ ನಂತರ ಕಡ್ಡಾಯವಾಗಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

<u>ಇವರಿಗೆ:</u>

ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:

1. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು - ಅಂತರ್ಜಾಲದಲ್ಲಿ ಅಳವಡಿಸಲು ಕೋರಿದೆ.
2. ಕಛೇರಿ ಪ್ರತಿ.

ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ದಿ.ನೌ.ವೇ/11/2021-22, ಬೆಂಗಳೂರು, ದಿನಾಂಕ:15.09.2021ಕ್ಕೆ ಅನುಬಂಧ

| ಕ್ರ. ಸಂ | ಸಿಬ್ಬಂದಿಯ ಹೆಸರು | ಕಾಲೇಜಿನ ಹೆಸರು | ಮಾಹೆವಾರು ಪಾವತಿಸಬೇಕಾಗಿರುವ ಮೊತ್ತ | ಸೆಪ್ಟಂಬರ್-2021 ರಿಂದ ನವಂಬರ್-2021ರಮಾಹೆಗಳಿಗೆ ಬಿಡುಗಡೆ ಮಾಡಬೇಕಾಗಿರುವ ಅನುದಾನದ ಮೊತ್ತ | ಜುಲೈ-21 ಮತ್ತು ಆಗಸ್ಟ್-21ರ ಹಿಂಬಾಕಿ ಮೊತ್ತ | ಒಟ್ಟು ಮೊತ್ತ |
|---|---|---|---|---|---|---|
| 01 | ಮೂರ್ತಿ ವಿ ಎಲ್ | ಸರ್ಕಾರಿ ವಿಜ್ಞಾನ ಕಾಲೇಜು ಬೆಂಗಳೂರು | 23962 | 71886 | 3138 | 75024 |
| 02 | ನಾಗರಾಜ ಎಂ | ಸರ್ಕಾರಿ ಆರ್ ಸಿ ಕಾಲೇಜು ಬೆಂಗಳೂರು | 23962 | 71886 | 3138 | 75024 |
| 03 | ಸಿದ್ದರಾಮಯ್ಯ ಟಿ | ಸರ್ಕಾರಿ ಕಲಾ ಕಾಲೇಜು ಬೆಂಗಳೂರು | 23962 | 71886 | 3138 | 75024 |
| 04 | ನಾಗರಾಜ್ ಡಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚಿಂತಾಮಣಿ | 21514 | 64542 | 3138 | 67680 |
| 05 | ಬೆಟ್ಟಯ್ಯ ಹೆಚ್ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಿರಾ | 21514 | 64542 | 3138 | 67680 |
| 06 | ಗಂಗಮ್ಮ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ | 21514 | 64542 | 3138 | 67680 |
| 07 | ಜಯನರಸಿಂಹಮೂರ್ತಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ | 21514 | 64542 | 3138 | 67680 |
| 08 | ಓಬಳೇಶಪ್ಪ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ | 21514 | 64542 | 3138 | 67680 |
| 09 | ಶಿವಲಿಂಗಯ್ಯ ಎಂ | ಮಹಾರಾಣಿ ಮಹಿಳಾ ಕಲಾ ಕಾಲೇಜು ಮೈಸೂರು | 22738 | 68214 | 3138 | 71352 |
| 10 | ನಾಗರಾಜೇಗೌಡ | ಸರ್ಕಾರಿ ಕಲಾ ಕಾಲೇಜು ಹಾಸನ | 21514 | 64542 | 3138 | 67680 |
| 11 | ಗಾಯಿತ್ರಿ ಎಂ ಎಸ್ | ಸರ್ಕಾರಿ ಮಹಿಳಾ ಕಾಲೇಜು ಮಂಡ್ಯ | 21514 | 64542 | 3138 | 67680 |
| 12 | ಶಿವಾನಂದ ಸಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭದ್ರಾವತಿ | 21514 | 64542 | 3138 | 67680 |
| 13 | ರಂಗಣ್ಣ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾನ್ವಿ | 21514 | 64542 | 3138 | 67680 |
| 14 | ಶಂಕರ ಅಡಿವೆಪ್ಪ | ಸರ್ಕಾರಿ ಕಾಲೇಜು ಕಲಬುರಗಿ | 22738 | 68214 | 3138 | 71352 |
| 15 | ಹಿರೆಗೆಪ್ಪ ರುಕ್ಕಪ್ಪಾ | | 22738 | 68214 | 3138 | 71352 |
| ಒಟ್ಟು ಮೊತ್ತ | | | 333726 | 1001178 | 47070 | 1048248 |

(ಹತ್ತು ಲಕ್ಷದ ನಲವತ್ತೆಂಟು ಸಾವಿರ ಇನ್ನೂರ ನಲವತ್ತೆಂಟು ಮಾತ್ರ)

ಕಾಲೇಜು ಶಿಕ್ಷಣ ನಿರ್ದೇಶಕರು

Received on 15/09/2021

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ನಡವಳಿಗಳು

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಯೋನಿವೃತ್ತಿ/ನಿಧನ ಹೊಂದಿರುವ ದಿನಗೂಲಿ ನೌಕರರಿಗೆ ಬಾಕಿ ವೇತನ ಮತ್ತು ಶವ ಸಂಸ್ಕಾರಕ್ಕೆ ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ:77 ಶಾಸನ 2012, ಬೆಂಗಳೂರು, ದಿನಾಂಕ:15.02.2012.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ:146:ಸೇಸ್ಥ:2015, ಬೆಂಗಳೂರು, ದಿನಾಂಕ:16.05.2019.
3. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:128:ಸೇಸ್ಥಅ:2014, ಬೆಂಗಳೂರು, ದಿನಾಂಕ:22.01.2021.
4. ಸರ್ಕಾರದ ಆದೇಶ ಸಂಖ್ಯೆ:ಇಡಿ:65;ಹೆಚ್‌ಪಿಸಿ:2021, ದಿನಾಂಕ:31.08.2021
5. ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು(ಸ್ವಾಯತ್ತ), ಮೈಸೂರು, ಇವರ ಪತ್ರ ಸಂಖ್ಯೆ:ಮಮವಿಕಾ:ಮೈ:136:2021-22, ದಿನಾಂಕ:25.06.2021.

******

**ಪ್ರಸ್ತಾವನೆ:**

ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ್ಲಿ ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ದಿನಾಂಕ:10.04.2006ರಂದು 10ವರ್ಷಗಳಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ದಿನಗೂಲಿ ನೌಕರರನ್ನು ಅವರು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೂ ದಿನಗೂಲಿ ಆಧಾರದ ಮೇಲೆ ಮುಂದುವರೆಸಲು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಹಾಗೂ ಉಲ್ಲೇಖ(3)ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರಡಿ ಅಧಿಸೂಚಿಸಲ್ಪಟ್ಟ ದಿನಗೂಲಿ ನೌಕರರು ಸೇವೆಯಲ್ಲಿರುವಾಗಲೇ ಮರಣ ಹೊಂದಿದಲ್ಲಿ ಅಂತವರುಗಳ ಕುಟುಂಬಕ್ಕೆ ರಾಜ್ಯ ಸರ್ಕಾರಿ ನೌಕರರಿಗೆ ನೀಡಲಾಗುತ್ತಿರುವ ವಿಧಿವಿಧಾನದಲ್ಲಿಯೇ ಹಾಗೂ ಈ ಸಂಬಂಧ ಸೂಚನೆಗೊಳಪಟ್ಟು 5,000/-(ಐದು ಸಾವಿರ ರೂಪಾಯಿಗಳು ಮಾತ್ರ) ಶವ ಸಂಸ್ಕಾರ ಸಹಾಯಧನವನ್ನು ಪಾವತಿ ಮಾಡಲು ಅನುಮತಿ ನೀಡಲಾಗಿದೆ.

ಉಲ್ಲೇಖ(4)ರ ಸರ್ಕಾರದ ಆದೇಶದಲ್ಲಿ 2021-22ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡಿರುವ ಅನುದಾನದಲ್ಲಿ ದಿನಗೂಲಿ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನ ಪಾವತಿಗೆ ಅನುದಾನವನ್ನು ಬಿಡುಗಡೆ ಮಾಡಲು ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳಿಗೆ ಆರ್ಥಿಕ ಪ್ರತ್ಯಾಯೋಜನೆಯನ್ನು ನೀಡಿ ಆದೇಶ ಹೊರಡಿಸಲಾಗಿರುತ್ತದೆ.

ಸರ್ಕಾರದ ಆದೇಶದನ್ವಯ ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಗೂಲಿ ಸಿಬ್ಬಂದಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದ 34 ದಿನಗೂಲಿ ನೌಕರರುಗಳಲ್ಲಿ ಪ್ರಸ್ತುತ ಉಲ್ಲೇಖ(5)ರಲ್ಲಿ 01 ಖಾಯಂ ದಿನಗೂಲಿ ಸಿಬ್ಬಂದಿ ಶ್ರೀಮತಿ ಬಸಮ್ಮ ದಿನಗೂಲಿ ನೌಕರರು ದಿನಾಂಕ:02.03.2021ರಲ್ಲಿ ಅನಾರೋಗ್ಯದಿಂದ ಮರಣ ಹೊಂದಿರುತ್ತಾರೆ ಎಂದು ತಿಳಿಸಿರುತ್ತಾರೆ. ಉಲ್ಲೇಖ(3)ರ ಸರ್ಕಾರದ ಆದೇಶದಂತೆ ಸದರಿ ದಿನಗೂಲಿ ನೌಕರರ ಶವಸಂಸ್ಕಾರಕ್ಕಾಗಿ ಕಾಲೇಜಿನಿಂದ ಸ್ವೀಕೃತವಾಗಿರುವ ಪ್ರಸ್ತಾವನೆಯಲ್ಲಿ ಕೋರಿರುವಂತೆ ರೂ.5000/-ಗಳನ್ನು ಮತ್ತು ಸದರಿ ದಿನಗೂಲಿ ನೌಕರರಿಗೆ ಡಿಸೆಂಬರ್-2020 ರಿಂದ ಫೆಬ್ರವರಿ-2021, ಮಾರ್ಚ್-2021ರ 02ದಿವಸಗಳ ಒಟ್ಟುರೂ.65,007/-ಮೊತ್ತವನ್ನು ದಿ॥ ಶ್ರೀಮತಿ ಬಸಮ್ಮ ಇವರ ವೇತನ ಹಿಂಬಾಕಿ ಮತ್ತು ಶವಸಂಸ್ಕಾರಕ್ಕಾಗಿ ಅನುದಾನವನ್ನು 2021-22ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ:2202-03-103-2-01-033ರಡಿಯಲ್ಲಿ

ಒದಗಿಸಿರುವ ಅನುದಾನದಲ್ಲಿ ಸದರಿ ಸಿಬ್ಬಂದಿಗಳಿಗೆ ಒಟ್ಟು ರೂ.70,007/-(ಎಪ್ಪತ್ತು ಸಾವಿರದ ಏಳು ರೂಪಾಯಿಗಳು ಮಾತ್ರ)ಅನುದಾನವನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಬಿಡುಗಡೆ ಮಾಡಲು ಈ ಆದೇಶ:

ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ದಿ.ನೌ.ವೇ/11/2020-21, ಬೆಂಗಳೂರು, ದಿನಾಂಕ:15.09.2021.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು(ಸ್ವಾಯತ್ತ), ಮೈಸೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 01 ದಿನಗೂಲಿ ನೌಕರರಿಗೆ ಬಿಡುಗಡೆ ಮಾಡಬೇಕಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಸಿಬ್ಬಂದಿಯ ಹೆಸರು | ಕಾಲೇಜಿನ ಹೆಸರು | ಬಿಡುಗಡೆ ಮಾಡಬೇಕಾದ ವೇತನ ಬಾಕಿ |
|---|---|---|---|
| 01 | ಶ್ರೀಮತಿ ಬಸಮ್ಮ | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು(ಸ್ವಾಯತ್ತ),ಮೈಸೂರು | ರೂ.5000/-(ಶವಸಂಸ್ಕಾರಕ್ಕಾಗಿ)<br>ರೂ.65007/-(ವೇತನ ಬಾಕಿ) |
| | | ಒಟ್ಟು ಮೊತ್ತ | ರೂ.70,007 /- |

ಹೆಸರಿನ ಮುಂದೆ ನಮೂದಿಸಿರುವ ಮೊತ್ತ ಪಾವತಿಸಲು ರೂ.70,007/-(ಎಪ್ಪತ್ತು ಸಾವಿರದ ಏಳು ರೂಪಾಯಿಗಳು ಮಾತ್ರ) ಅನ್ನು ಪಾವತಿಸುವ ಸಂಬಂಧ, 2021-22ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ:2202-03-103-2-01-033ರಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಕಾಲೇಜಿನ ಸಂಬಂಧಪಟ್ಟ ಪ್ರಾಂಶುಪಾಲರಿಗೆ ಅನುದಾನ ಬಿಡುಗಡೆ ಮಾಡಲು ಅನುಮತಿ ನೀಡಿ ಆದೇಶಿಸಲಾಗಿದೆ.

(ಮಾನ್ಯ ಆಯುಕ್ತರಿಂದ ಇ-ಆಫೀಸ್‌ನಲ್ಲಿ ಟಿಪ್ಪಣಿ ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ನಿರ್ದೇಶಕರು

ಷರತ್ತುಗಳು :

1.ಬಿಡುಗಡೆಗೊಳಿಸಿರುವ ಅನುದಾನವನ್ನು ನಿಯಮಾನುಸಾರ ಪರಿಶೀಲಿಸಿ ಬಿಡುಗಡೆಗೊಳಿಸಿರುವ ಉದ್ದೇಶಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ನಿಯಮಗಳನ್ನು ಪಾಲಿಸಿ ಅದರನ್ವಯವೇ ಪಾವತಿಸುವುದು.
2.ಸದರಿ ಅನುದಾನವನ್ನು ಕೆ-2 ತಂತ್ರಾಂಶದಲ್ಲಿ ಕ್ಲೇಮ್ ಮಾಡತಕ್ಕದ್ದು.
3.ಅನುದಾನ ಬಳಕೆಯಾದ ನಂತರ ಕಡ್ಡಾಯವಾಗಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು

ಇವರಿಗೆ:

ಪ್ರಾಂಶುಪಾಲರು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು(ಸ್ವಾಯತ್ತ),ಮೈಸೂರುಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:

1.ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಅಂತರ್ಜಾಲದಲ್ಲಿ ಅಳವಡಿಸಲು ಕೋರಿದೆ.
2.ಕಛೇರಿ ಪ್ರತಿ.